ಸಿ.ಸಿ.804/2016
ಪಿಡಬ್ಲ್ಯೂ: 1

ಇಂದು ದಿನಾಂಕ:26.09.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು:** ಆರೋಪಿ ಪರ ಶ್ರೀ ಜಿಡಿ ವಕೀಲರಿಂದ:

1. ನಾನು ಅರಣ್ಯ ಇಲಾಖೆಯಲ್ಲಿ 30 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ. ಅರಣ್ಯ ಇಲಾಖೆಯಲ್ಲಿ ಬೀಟ್‌ಗೆ ಹೋಗುತ್ತಾರೆ ಎಂದರೆ ಸರಿ. ಸರ್ವೆ ನಂ.23 ಒಟ್ಟು ಎಷ್ಟು ಎಕರೆ ಎಂದು ನನಗೆ ಗೊತ್ತಿಲ್ಲ. ಅದು ಕಂದಾಯ ಜಮೀನು ಎಂದರೆ ಸಾಕ್ಷಿಯು ಅರಣ್ಯ ಸಹ ಇದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ್ deemed forest ಆಗಿರುತ್ತದೆ. ಅದು ಯಾವ ವರ್ಷದಿಂದ deemed forest ಆಗಿರುತ್ತದೆ ಎಂದು ನನಗೆಗೊತ್ತಿಲ್ಲ. ಸಾಕ್ಷಿಯು ಅದರಲ್ಲಿ 300 ಎಕರೆ ಅರಣ್ಯ ಎಂದು RTC ಯಲ್ಲಿ ಇದೆ ಎನ್ನುತ್ತಾರೆ. ಅರಣ್ಯ ಇಲಾಖೆಗೆ ಎಷ್ಟು ಆಸ್ತಿ ಬರುತ್ತದೆ ಮತ್ತು ಕಂದಾಯ ಜಮೀನು ಎಷ್ಟು ವಿಸ್ತೀರ್ಣ ಇದೆ ಎಂದು ಸ್ಕೆಚ್‌ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಮೋಜಣಿ ಮಾಡುವ ಕಾಲಕ್ಕೆ ಆರೋಪಿತರಿಗೆ ನೋಟಿಸು ನೀಡಿ ಕರೆದಿಲ್ಲ. 1999 ರಲ್ಲಿಯೇ ಸರ್ವೆಯಾಗಿ ಒತ್ತುವರಿಯ ಬಗ್ಗೆ ಪ್ರಕರಣ ದಾಖಲಾಗಿತ್ತು.

2. 1999 ರಲ್ಲಿ ಸರ್ವೆ ನಂ.23 ಅರಣ್ಯ ಇಲಾಖೆಗೆ ಸೇರಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ತೋಟದಲ್ಲಿರುವ ಮರಗಳನ್ನು ಯಾರು ಮರಗಚ್ಚು ಮಾಡಿದ್ದರು ಎಂದು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸಾಕ್ಷಿಯು ಸುಮಾರು 5-6 ವರ್ಷಗಳ ಮೊದಲೇ ಆಗಿತ್ತು ಎಂದು ನುಡಿಯುತ್ತಾರೆ. ಮೋಜಣಿ ಮಾಡಿದ ದಿನಾಂಕ ನನಗೆ ಗೊತ್ತಿಲ್ಲ. ನಿಪಿ-32 ನಮ್ಮ ಇಲಾಖೆಯವರು ಮಾಡಿದ್ದಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿ ಮಹಜರ್ ಮಾಡಿದ್ದು ಮತ್ತು ಮೋಜಣಿ ಮಾಡಿದ್ದು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ಒತ್ತುವರಿ ಜಾಗದಲ್ಲಿ ಮರಗಚ್ಚು ಮಾಡಿರುತ್ತಾರೆ ಎಂಬುದು ಸುಳ್ಳು ಎಂದರೆ ಸರಿಯಲಲ್ಲ.

3. ಆರೋಪಿತರು ನಮ್ಮ ಇಲಾಖೆಯ ವಿರುದ್ಧ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಒಂದು ರಿಟ್ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದ್ವೇಷದಿಂದ ಈ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಹೋಗಿ ಯಾವುದೇ ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮರಗಚ್ಚು ಮಾಡಿದ ಮರಗಳಿಗೂ ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಒತ್ತುವರಿ ನಕಾಶೆ ಮಾಡಿ ಅಮಾನತು ವರದಿಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

C/c ಎ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ